BKN-22

Sl.No. : **Total No. of Pages : 4**

ದ್ವಿತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ - 2025
(SLM Scheme)
ಐಚ್ಛಿಕ ಕನ್ನಡ (ಪತ್ರಿಕೆ–೨)
ನಡುಗನ್ನಡ ಮತ್ತು ಹೊಸಗನ್ನಡ ಪದ್ಯಗಳು
(ಬಸವರಾಜದೇವರ ರಗಳೆ, ಹರಿಶ್ಚಂದ್ರ ಕಾವ್ಯ ಸಂಗ್ರಹ, ಕೆ.ಎಸ್.ನ ಅವರ ಆಯ್ದ ಕವನಗಳು ಮತ್ತು ಬೆರಳ್‌ಗೆ ಕೊರಳ್)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

<u>ವಿಭಾಗ–ಎ</u>

(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ : 20 ಅಂಕಗಳು)

ಪ್ರ1) <u>ಎರಡರ</u> ಭಾವವನ್ನು ಸಂದರ್ಭ ಸಹಿತ ವಿವರಿಸಿ: **[2×4=8]**

೧) ಅಲ್ಲಿ ಕಾಣುತ್ತೆ ಬರಲಿಲ್ಲ ಚೇತನವಾಯ್ತು
ಅಲ್ಲಿ ನಡೆತರುತಮಿರಲಲ್ಲಿ ಉಸಿರುಂಟಾಯ್ತು
ಅಲ್ಲಿ ಬಾಗಿಲ್ಗೆ ಬರಲಲ್ಲಿ ಮೈಮುರಿದೆದ್ದು
ಮೆಲ್ಲನ್ಯೆತಂದು ಮುಂಗೆದಱೆ ಕಣ್ದೆರೆದೆದ್ದು।
ಜಂಗಮ ಪ್ರಾಣಿ ಶಿವಭಕ್ತಿ ಕಣ್ದೆಱೆವಂತೆ
ಸಂಗಮೇಶ್ವರನ ಕಡುನಿಷ್ಠೆ ಕಣ್ದೆಱೆವಂತೆ.

ಅಥವಾ

ಎಲೆ ಬಸವ ಕಿನ್ನರಯ್ಯಂ ತಮ್ಮ ದೇವಂಗೆ
ಸಲೆ ಸೊಗಸಿನುಳ್ಳಿಯಂ ತರೆ ಮಲ್ಲಿನಾಥಂಗೆ
ಕಂಡದಂ ನಿಂದಿಸಿದರೆಂದು ಘನಕೋಪದಿಂ
ಕೆಂಡವಂ ಮೆಟ್ಟಿದಂತಾಗಿ ಸಂತಾಪದಿಂ।
ಮುಳಿದು ಪೋದರು.....

೨) ನುಡಿಯಲಜೆಯದೆ ಸಕಲ ರಾಜ್ಯಮಂ ಹೋಗಾಡಿ
ಕಡೆಗಧಿಕ ಋಣಿಯಾಗಿ ನೆಲೆಗೆಟ್ಟು ಮಂತ್ರಿವೆರ
ಸಡವಿಗುಜೆಯಾಗಿ ಕೈವಿಡಿದ ಸತಿಪುತ್ರಂ ಮಾಜೆ ಸುಕ್ಷೇತ್ರದೊಳಗೆ
ಕಡೆಗೆ ಚಂಡಾಲ ಕಿಂಕರನಾಗಿ ದೋಷಕ್ಕೆ
ನಡುಗದೆ ಕುಲಾಚಾರಮಂ ಬಿಟ್ಟು ಜನಗೆ ನಗೆ
ಗೆಡೆಯಾದ ಪಾತಕ ಹರಿಶ್ಚಂದ್ರನವನನೇನೆಂದು ನೆನೆದಪೆಯೆಂದನು.

ಅಥವಾ

ಸಂದ ಕಾರಿರುಳ ಕನ್ನೆಯರು ಹಗಲಂ ನೋಡ
ಲೆಂದು ಬಂದರೊ ಸುರಾಸುರರಬುಧಿಯಂ ಮಥಿಸು
ವಂದು ಹೊಸವಿಷದ ಹೊಗೆಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ
ನೊಂದು ಮಾನಿಸರಾದರೋ ಕಮಲಜಂ ನೀಲ
ದಿಂದ ಮಾಡಿದ ಸಾಲಭಂಜಿಕಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂಗನೆಯರನೀಶನೆಡೆಗೆ.

ಪ್ರ2) <u>ಎಂಟು</u> ಪದಗಳಿಗೆ ಅರ್ಥ ಬರೆಯಿರಿ: **[8×½=4]**

ಕಟಕಿ, ಪರಡಿ, ನಯ, ಗಾವುದ, ಎಳಸು, ನೇಹ, ಅಂಘ್ರಿ, ಮುರುಟು, ಸುಗಿ, ಮುಟ್ಟಿಗೆ.

ಪ್ರ3) <u>ಒಂದು</u> ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ: **[1×4=4]**

೧) ವೃಷಭದೇವನ ಉಪದೇಶ
೨) ಹರಿಶ್ಚಂದ್ರ ಕಾವ್ಯದ ವೈಶಿಷ್ಟ್ಯ.

ಪ್ರ4) <u>ಎರಡರ</u> ಸಂದರ್ಭ ಸ್ವಾರಸ್ಯವನ್ನು ವಿವರಿಸಿ: **[2×2=4]**

೧) ಮನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ

ಅಥವಾ

ಸರ್ವ ಭಂಡಾರವೆಲ್ಲಂ ನಿನಗೆ ಬಸವಣ್ಣ.

೨) ಇಲ್ಲಿಯ ಸುಖಂ ದೇವ ಅಲ್ಲಿಯುಳ್ಕೊಡೆ ಲೇಸು

ಅಥವಾ

ತನಯನಂ ಮಡದಿಯಂ ಮಾಱುಗೊಂಬಧಿಕರಿಲ್ಲಾ.

ವಿಭಾಗ–ಬಿ

(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ : 30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಹರಿಹರನ ವರ್ಣನೆಗಳ ವಿಶೇಷತೆ ಮತ್ತು ಔಚಿತ್ಯವನ್ನು ಸೋದಾಹರಣವಾಗಿ ವಿಶ್ಲೇಷಿಸಿ.

೨) 'ಬಸವರಾಜ ದೇವರ ರಗಳೆ'ಯ ಕಥನಕ್ರಮವನ್ನು ನಿರೂಪಿಸಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ರಾಘವಾಂಕ ಕವಿಯು ವೀರಬಾಹುಕನ ಪಾತ್ರವನ್ನು ಹೇಗೆ ವರ್ಣಿಸಿದ್ದಾನೆ? ವಿವರಿಸಿ.

೨) ಹರಿಶ್ಚಂದ್ರನು ತನಗೆ ಬಂದೊದಗಿದ ಕಷ್ಟವನ್ನು ಜಯಿಸಿದ ಬಗೆಯನ್ನು ವಿವರಿಸಿ.

ಪ್ರ7) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: **[2×5=10]**

೧) ಭಂಡಾರ ದ್ರೋಹದ ಅಪವಾದ

ಅಥವಾ

ಹರಿಹರನ ಸ್ವಮತ ಅಭಿಮಾನ

೨) ಮೃಗಯಾ ಪ್ರಸಂಗ

ಅಥವಾ

ಚಂದ್ರಮತಿಯ ಶೋಕ

ವಿಭಾಗ–ಸಿ

(ಕೆ.ಎಸ್.ನ ಅವರ ಆಯ್ದ ಕವನಗಳು, ಬೆರಳ್‌ಗೆ ಕೊರಳ್ : 30 ಅಂಕಗಳು)

ಪ್ರ8) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) 'ಮನೆಗೆ ಬಂದ ಹೆಣ್ಣು' ಕವನದಲ್ಲಿ ನವವಧುವಿನ ಚಿತ್ರಣ ಹೇಗೆ ನಿರೂಪಣೆಗೊಂಡಿದೆ? ವಿವರಿಸಿ.

೨) 'ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ' ಈ ಮಾತಿನ ಹಿನ್ನೆಲೆಯಲ್ಲಿ ಕವನವನ್ನು ಚರ್ಚಿಸಿ.

ಪ್ರ9) <u>ಒಂದು</u> ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ: **[1×5=5]**

೧) 'ಕುಂಕುಮಭೂಮಿ' ಕವಿತೆಯ ಆಶಯ

೨) 'ಮೆರವಣಿಗೆ' ಕವಿತೆಯ ವಸ್ತು.

ಪ್ರ10)<u>ಒಂದು</u> ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಬೆರಳ್‌ಗೆ ಕೊರಳ್ ನಾಟಕದ ಸ್ವಾರಸ್ಯ ಮತ್ತು ಮಹತ್ವವನ್ನು ಚರ್ಚಿಸಿ.

೨) ಅಬ್ಬೆ ಮತ್ತು ದ್ರೋಣರ ಪಾತ್ರಗಳ ವೈಶಿಷ್ಟ್ಯವನ್ನು ವಿವರಿಸಿ.

ಪ್ರ11)<u>ಒಂದು</u> ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ: **[1×5=5]**

೧) ಏಕಲವ್ಯ

೨) ಅಶ್ವತ್ಥಾಮ

